# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಶುಭಾಂಗಿ ವ್ಹಿ ತಿಪ್ಪಾ ಅಧ್ಯಕ್ಷರು ಹಾಗೂ ಶ್ರೀ ಶಿವಶರಣಪ್ಪಾ ಉಪಾಧ್ಯಕ್ಷರು, ಹಾಗರಗಾ ಗ್ರಾಮ ಪಂಚಾಯಿತಿ, ಕಲಬುರಗಿ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರುಗಳ ಅಧ್ಯಕ್ಷ/ಉಪಾಧ್ಯಕ್ಷ ಹಾಗೂ ಸದಸ್ಯತ್ವವನ್ನು ತೆಗೆದುಹಾಕುವ ಕುರಿತು– ಆದೇಶ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 1135 ಗ್ರಾಪಂಅ 2018, ದಿನಾಂಕ:02.02.2019.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ: ಜಿಪಂಕ. ಡಿಆರ್‌ಡಿಎ/ಗ್ರಾಪಂ/134/2018-19/665, ದಿನಾಂಕ: 11.03.2019
3) ಪ್ರಾದೇಶಿಕ ಆಯುಕ್ತರು ಹಾಗೂ ವಿಚಾರಣಾಧಿಕಾರಿಗಳು ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ: ಕಂ/ಪ್ರಾಆಕ/ಜಿಪಂ/149/2018-19/842, ದಿನಾಂಕ:20.05.2019.

**ಪ್ರಸ್ತಾವನೆ:-**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು 48(4) ಮತ್ತು 48(5) ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಮೇಲೆ ದಾಖಲಾಗುವ ದೂರುಗಳಿಗೆ ಸಂಬಂಧಿಸಿದಂತೆ ಅರೆ ನ್ಯಾಯಿಕ ಮಾದರಿಯಲ್ಲಿ ವಿಚಾರಣೆ ನಡೆಸುವ ಅಧಿಕಾರವನ್ನು ಸಂಬಂಧಿಸಿದ ಕಂದಾಯ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳಿಗೆ ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶ ದಿನಾಂಕ:02.02.2019 ರಲ್ಲಿ ವಹಿಸಿ ಆದೇಶಿದೆ.

ಶ್ರೀಮತಿ ಶುಭಾಂಗಿ ವ್ಹಿ ತಿಪ್ಪಾ ಅಧ್ಯಕ್ಷರು ಹಾಗೂ ಶ್ರೀ ಶಿವಶರಣಪ್ಪಾ ಉಪಾಧ್ಯಕ್ಷರು, ಹಾಗರಗಾ ಗ್ರಾಮ ಪಂಚಾಯಿತಿ, ಕಲಬುರಗಿ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರು ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ), 48(4) ಮತ್ತು 48(5)ರನ್ವಯ ಕ್ರಮ ಜರುಗಿಸಿ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಲಬುರಗಿ ಜಿಲ್ಲೆ, ಕಲಬುರಗಿ ಇವರು ಪ್ರಾದೇಶಿಕ ಆಯುಕ್ತರು ಹಾಗೂ ವಿಚಾರಣಾಧಿಕಾರಿಗಳು ಕಲಬುರಗಿ ವಿಭಾಗ, ಕಲಬುರಗಿ ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಿರುತ್ತಾರೆ.

ಅದರಂತೆ ಪ್ರಾದೇಶಿಕ ಆಯುಕ್ತರು ಹಾಗೂ ವಿಚಾರಣಾಧಿಕಾರಿಗಳು ಓದಲಾದ ಕ್ರಮಾಂಕ (3)ರಲ್ಲಿ ಪ್ರಕರಣದ ಪೂರ್ಣಪ್ರಮಾಣದ ವಿಚಾರಣೆಯನ್ನು ನಡೆಸಿ ಸರ್ಕಾರಕ್ಕೆ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಾಗರಗಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಶುಭಾಂಗಿ ವ್ಹಿ ತಿಪ್ಪಾ ಅಧ್ಯಕ್ಷರು ಹಾಗೂ ಶ್ರೀ ಶಿವಶರಣಪ್ಪಾ ಉಪಾಧ್ಯಕ್ಷರು, ಹಾಗರಗಾ ಗ್ರಾಮ ಪಂಚಾಯಿತಿ, ಕಲಬುರಗಿ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರುಗಳ ವಿರುದ್ದದ ಈ ಕೆಳಕಂಡಂತೆ ಇರುತ್ತವೆ.

1. ಯಾವುದೇ ಕೃಷಿ ಜಮೀನಿನಲ್ಲಿ ಪ್ಲಾಟ್ ರಚನೆ ಮಾಡಿ ನಮೂನೆ-11ರ ರಿಜಿಸ್ಟರ್‌ನಲ್ಲಿ ದಾಖಲು ಮಾಡಬೇಕಾದರೆ ಕೃಷಿಯೇತರ ಪರಿವರ್ತನೆ ಆಗಬೇಕಾಗಿರುತ್ತದೆ ಮತ್ತು ನಗರಾಭಿವೃದ್ಧಿ ಹಾಗೂ ಯೋಜನಾ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಅಗಬೇಕಾಗಿರುತ್ತದೆ. ಆದರೆ ಇದನ್ನು ಪರಿಗಣಿಸದೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಶಾಮಿಲಾಗಿ ಹಾಗರಗಾ ಗ್ರಾಮದ ಸರ್ವೆ ನಂ281/2/23ರಲ್ಲಿ 158 ಕೃಷಿ ಭೂಮಿಯಲ್ಲಿ ಪ್ಲಾಟ್‌ಗಳನ್ನು ರಚಿಸಿ ಕಾನೂನು ಬಾಹಿರವಾಗಿ ಡಿಸಿಬಿ ರಿಜಿಸ್ಟರ್/ಆಸ್ತಿ ರಿಜಿಸ್ಟರ್‌ನಲ್ಲಿ ಸೇರಿಸಿ ಸರ್ಕಾರದ ನಿಮಯಗಳನ್ನು ಉಲ್ಲಂಘಿಸಿರುತ್ತಾರೆ.
2. ಸಾಮಾನ್ಯ ಪುಸ್ತಕದ ಬದಲಾಗಿ ಸಾಮಾನ್ಯ ಪಾವತಿ ಬುಕ್ ನಂ. 1 ರಿಂದ 3ರವರೆಗೆ ಉಪಯೋಗಿಸಿರುವುದು **(3 ರಸೀದಿಗಳು ರದ್ದುಪಡಿಸಿರುವುದು)** ಎಂದು ತಿಳಿಸಿದ್ದು ಅದರ ವಿವರಗಳು ಈ ಕೆಳಗಿನಂತೆ ಇರುತ್ತವೆ.

a) ಬುಕ್ ನಂ. 1ರ, ರಸೀದಿ
ನಂ–1 ರಿಂದ 94ರ ವರೆಗೆ........ ರೂ. 38,070–00, ದಿನಾಂಕ:28-08-2018

b) ಬುಕ್ ನಂ. 2ರ, ರಸೀದಿ
ನಂ–1 ರಿಂದ 94ರ ವರೆಗೆ........ ರೂ. 39,285–00, ದಿನಾಂಕ:06-09-18

c) ಬುಕ್ ನಂ 3ರ ರಸೀದಿ
ನಂ–1 ರಿಂದ 61ರ ವರೆಗೆ........ ರೂ. 24,705–00, ದಿನಾಂಕ:---------

ಒಟ್ಟು ರೂ, **1,02,060–00**

ಮೇಲಿನ **ಒಟ್ಟು ರೂ. 1,02,060–00**ಗಳನ್ನು ದುರುಪಯೋಗಪಡಿಸಿಕೊಂಡು ದಿನಾಂಕ:20.12.2018 ರಂದು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕಿಗೆ ಜಮಾ ಮಾಡಿರುವುದು ಕಂಡು ಬಂದಿರುತ್ತದೆಂದು ವಿಚಾರಣಾ ವರದಿಯಲ್ಲಿ ತಿಳಿಸಿದ್ದಾರೆ.

3. ಗ್ರಾಮ ಪಂಚಾಯಿತಿಯ ದಾಖಲೆಗಳು ನಿಯಮಾನುಸಾರ ಗ್ರಾಮ ಪಂಚಾಯಿತಿಯ ಕಛೇರಿಯಲ್ಲಿ ನಿರ್ವಹಿಸಿರುವುದಿಲ್ಲ ಹಾಗೂ ಕರ ವಸೂಲಿ ರಸೀದಿ ಬುಕ್‌ಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿರುವುದಿಲ್ಲ ಎಂದು ವಿಚಾರಣಾ ವರದಿಯಲ್ಲಿ ತಿಳಿಸಿದ್ದಾರೆ.

ಶ್ರೀಮತಿ ಶುಭಾಂಗಿ ವ್ಹಿ ತಿಪ್ಪಾ ಅಧ್ಯಕ್ಷರು ಹಾಗೂ ಶ್ರೀ ಶಿವಶರಣಪ್ಪಾ ಉಪಾಧ್ಯಕ್ಷರು, ಹಾಗರಗಾ ಗ್ರಾಮ ಪಂಚಾಯಿತಿ, ಕಲಬುರಗಿ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರುಗಳಿಗೆ ಕಾರಣ ಕೇಳುವ ನೋಟೀಸನ್ನು ದಿನಾಂಕ: 28–03–2019 ರಂದು ಅಪರ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ರವರು ನೀಡಿದ್ದು ತದನಂತರ ದಿನಾಂಕ:25–05–2019ರಂದು ವಿಚಾರಣೆ ನಡೆಸಿದ್ದು ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿದ್ದು ಸದರಿ ಪ್ರಕರಣದಲ್ಲಿ ಸರ್ಕಾರದ ಆದೇಶಗಳಲ್ಲಿನ ನಿರ್ದೇಶನಗಳನ್ನು ಪಾಲಿಸದೇ ನಿಯಮ ಉಲ್ಲಂಘನೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ಪ್ರಾದೇಶಿಕ ಆಯುಕ್ತರು ಹಾಗೂ ವಿಚಾರಣಾಧಿಕಾರಿಗಳು ಕಲಬುರಗಿ ವಿಭಾಗ, ಕಲಬುರಗಿ ಇವರು ವಿಚಾರಣಾವರದಿಯನ್ನು ಸಲ್ಲಿಸಿ ಆರೋಪಿತರುಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ), 48(4) ಮತ್ತು 48(5)ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದರಿಂದ ಇವರನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯ ಸ್ಥಾನದಿಂದ ತೆಗೆದು ಹಾಕಲು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರು ಹಾಗೂ ವಿಚಾರಣಾಧಿಕಾರಿಗಳು ಕಲಬುರಗಿ ವಿಭಾಗ, ಕಲಬುರಗಿ ಇವರು ಸರ್ಕಾರಕ್ಕೆ ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/527/ಗ್ರಾಪಂಅ/2019, ಬೆಂಗಳೂರು, ದಿನಾಂಕ:–04–02–2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀಮತಿ ಶುಭಾಂಗಿ ವ್ಹಿ ತಿಪ್ಪಾ ಅಧ್ಯಕ್ಷರು ಹಾಗೂ ಶ್ರೀ ಶಿವಶರಣಪ್ಪಾ ಉಪಾಧ್ಯಕ್ಷರು, ಹಾಗರಗಾ ಗ್ರಾಮ ಪಂಚಾಯಿತಿ, ಕಲಬುರಗಿ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರು ಎಸಗಿರುವ ಕರ್ತವ್ಯ ಲೋಪ ಹಾಗೂ ನಿಯಮ ಉಲ್ಲಂಘನೆಯ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ), 48(4) ಮತ್ತು 48(5)ರಡಿಯಲ್ಲಿ ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar
(ಬಿ.ನವೀನ್ ಕುಮಾರ್) 04/02/2020.
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾಮ ಪಂಚಾಯಿತಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

4/2/20

1. ಪ್ರಾದೇಶಿಕ ಆಯುಕ್ತರು ಹಾಗೂ ವಿಚಾರಣಾಧಿಕಾರಿಗಳು ಕಲಬುರಗಿ ವಿಭಾಗ, ಕಲಬುರಗಿ.

2. ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆ, ಕಲಬುರಗಿ,
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಕಲಬುರಗಿ, ಕಲಬುರಗಿ ಜಿಲ್ಲೆ.
5. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಾಗರಗಾ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಕಲಬುರಗಿ, ಕಲಬುರಗಿ ಜಿಲ್ಲೆ, **(ಪ್ರಕರಣಕ್ಕೆ ಸಂಬಂಧಿಸಿದವರಿಗೆ ಈ ಆದೇಶ ಜಾರಿಮಾಡಿ, ಸ್ವೀಕೃತಿ ಪಡೆದು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ).**
6. ಸಂಬಧಪಟ್ಟವರಿಗೆ.
7. ಇಲಾಖೆಯ ಗಣಕ ಕೋಶ
8. ಶಾಖಾ ರಕ್ಷಾ ಕಡತ/ಹೆಚ್ಚುವರಿ/ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ,